ಕರ್ನಾಟಕ ಸರ್ಕಾರ

# ಜಿಲ್ಲಾ ಪಂಚಾಯತ್, ರಾಯಚೂರು

ಸಂಖ್ಯೆ.ಜಿಪಂರಾ/ರೂರ್ಬನ್/ಹು.ಗು/ನೇ/03/2021-22 ದಿನಾಂಕ 07.06.2021

## ನೇಮಕಾತಿ ಪ್ರಕಟಣೆ

ಮಾನ್ಯ ಜಂಟಿ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ ಗ್ರಾಅಪ:RDC/31(10)EGS/2020 ದಿನಾಂಕ 04.05.2021 ರ ಮೇರೆಗೆ ಶ್ಯಾಮ್ ಪ್ರಸಾದ್ ಮುಖರ್ಜಿ ರೂರ್ಬನ್ ಯೋಜನೆಯ ಸಮಗ್ರ ಅನುಷ್ಠಾನಕ್ಕಾಗಿ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲೆಯ ಮುಖಾಂತರ ಜಿಲ್ಲಾ ಪಂಚಾಯತ್ ,ರಾಯಚೂರಿನ District Project Management Unit ನಲ್ಲಿ Regional Planning Specialist, Rural Development And Management Specialist, Engineering Specialist ಹಾಗೂ ಮತ್ತು ಲಿಂಗಸೂಗೂರು ತಾಲೂಕು ಪಂಚಾಯತಿಯ Cluster Development Management ನಲ್ಲಿ ಖಾಲಿ ಇರುವ Spatial Planning Professional ಮತ್ತು Rural Management Professional ಹುದ್ದೆಗಳಿಗೆ ದಿನಾಂಕ: 09.06.2021 ರಿಂದ ಹೊರಗುತ್ತಿಗೆ ಆಧಾರದಲ್ಲಿ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಆಹ್ವಾನಿಸಲಾಗಿದೆ.

ಈ ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು Notification ನಲ್ಲಿ ಸೂಚಿಸಿದಂತೆ Resume ಗಳನ್ನು ಹಾಗೂ ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥಗಳು ( ಏನಾದರು ಇದ್ದಲ್ಲಿ) ಮಾಹಿತಿಯನ್ನು ತುಂಬಿ, ಅರ್ಜಿಯನ್ನು ಜಿಲ್ಲಾ ಪಂಚಾಯತಿಯ http://www.zpraichur.kar.nic.in ನಲ್ಲಿ Online ಮೂಲಕ ದಿನಾಂಕ:23.06.2021 ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಖಾಲಿ ಇರುವ ಹುದ್ದೆಗಳ ವಿವರ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಮತ್ತು ಅನುಭವ | ವೇತನ | ವಯೋಮಿತಿ | ಜಿಲ್ಲಾ ಹಾಗೂ ತಾಲೂಕು ಕಛೇರಿಯ ಹೆಸರುಗಳು |
|---|---|---|---|---|---|---|
| 1 | Regional Planning Specialist | 1 | The candidate is required to Possess Minimum of Post Graduate degree in Rural Management /Regional Planning /Spatial Planning with 2 Years of relevant experience | Rs. 30,000/- | ಕನಿಷ್ಟ 25 ರಿಂದ ಗರಿಷ್ಟ 45 ವರ್ಷ | District Project Management Unit (DPMU) ಜಿಲ್ಲಾ ಪಂಚಾಯತ್, ರಾಯಚೂರು. |
| 2 | Rural Development And Management Specialist | 1 | The candidate is required to Possess Minimum of Bachelor degree in rural development/Rural Management Agriculture, /Social Science with 2 Years of experience preferably in rural sector within the state | Rs. 25,000/- | ಕನಿಷ್ಟ 25 ರಿಂದ ಗರಿಷ್ಟ 45 ವರ್ಷ | |
| 3 | Engineering Specialist | 1 | The candidate is required to Possess Bachelor Degree in civil Engineering with 2 Years of relevant experience | Rs. 25,000/- | ಕನಿಷ್ಟ 25 ರಿಂದ ಗರಿಷ್ಟ 45 ವರ್ಷ | |
| 4 | Spatial Planning Professional | 1 | The candidate is required to Possess Graduate degree in Urban planning | Rs. 20,000/- | ಕನಿಷ್ಟ25 ರಿಂದ ಗರಿಷ್ಟ 45 ವರ್ಷ | Cluster Development Management Unit(CDMU) |

| | | | | | | |
|---|---|---|---|---|---|---|
| 5 | Rural Management Professional | 1 | The candidate is required to Possess Bachelors in Civil Engineering with 1 Year Experience | Rs. 20,000/- | ಕನಿಷ್ಟ 25 ರಿಂದ ಗರಿಷ್ಟ 45 ವರ್ಷ | ತಾಲ್ಲೂಕು ಪಂಚಾಯತ್,ಲಿಂಗಸೂಗೂರು. |

1. ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಯು Resume ಗಳನ್ನು ಹಾಗೂ ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥಗಳು (ಏನಾದರು ಇದ್ದಲ್ಲಿ) ಮಾಹಿತಿಯನ್ನು ತುಂಬಿ, Online ಮೂಲಕ ಅರ್ಜಿಯನ್ನು ಸಲ್ಲಿಸುವುದು.
2. ವಯೋಮಾನ ಪ್ರಕಟಣೆ ಹೊರಡಿಸಿದ ಕೊನೆಯ ದಿನಾಂಕಕ್ಕೆ ಕನಿಷ್ಟ 25 ಹಾಗೂ ಗರಿಷ್ಟ 45 ಮೀರಿರಬಾರದು.
3. ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ, ಕನ್ನಡ ಮತ್ತು ಇಂಗ್ಲೀಷ್ ಭಾಷೆ ಚೆನ್ನಾಗಿ ತಿಳಿದಿರಬೇಕು.
4. ಆಯ್ಕೆಯಾದ ಅಭ್ಯರ್ಥಿಗಳು ರಾಯಚೂರು ಜಿಲ್ಲೆಯ ಯಾವುದೇ ಭಾಗದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಸಿದ್ದರಿರಬೇಕು.
5. ಗುತ್ತಿಗೆ ಅವಧಿಯು ಯೋಜನೆಯ ಮುಕ್ತಾಯದೊಂದಿಗೆ ಅಂತ್ಯವಾಗುತ್ತದೆ.

- ನೇಮಕಾತಿ ವಿಧಾನ.

1. ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಿ ನಿಗದಿತ ವಿದ್ಯಾರ್ಹತೆ ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿಕಾರ್ಯನಿರ್ವಹಣಾ ಅನುಭವ ಹೊಂದಿರುವ ಅಭ್ಯರ್ಥಿಗಳನ್ನು ಅವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾದ ಮೆರಿಟ್ ಪಟ್ಟಿ ತಯಾರಿಸಲಾಗುವುದು.
2. ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಪ್ರತಿ ಹುದ್ದೆಗೆ 1:5 ಅನುಪಾತದಲ್ಲಿ ಕಿರುಪಟ್ಟಿ ಸಿದ್ದಪಡಿಸಲಾಗುವುದು.
3. 1:5 ಅನುಪಾತದಲ್ಲಿ ಕಿರುಪಟ್ಟಿ ಮಾಡಲಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುವುದು.
4. ಲಿಖಿತ ಪರಿಕ್ಷೆಯ ಮೌಲ್ಯಮಾಪನದಲ್ಲಿ ಅಭ್ಯರ್ಥಿಗಳು ಗಳಿಸಿದ ಶೇಕಡ 50% ರಷ್ಟು ಮತ್ತು ನಿಗದಿ ಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ ಕಾರ್ಯನುಭವಕ್ಕಾಗಿ ಶೇಕಡಾವರು ಗಳಿಸಿದ ಅಂಕಗಳಲ್ಲಿ ಶೇಕಡ 50% ರಷ್ಟು Weightage ಅಂಕಗಳನ್ನು ನೀಡಿ ಅಂತಿಮ ಮೆರಿಟ್ ಪಟ್ಟಿ ಸಿದ್ದಪಡಿಸಲಾಗುವುದು.

   ಉದಾಹರಣೆ: ಪದವಿಯಲ್ಲಿ ಶೇಕಡ 70% ಅಂಕಗಳನ್ನು ಪಡೆದಿದ್ದಲ್ಲಿ ಆ ಅಭ್ಯರ್ಥಿಗೆ 70 ಅಂಕಗಳನ್ನು ನೀಡಲಾಗುವುದು ಹಾಗೂ 1 ವರ್ಷದ ಕಾರ್ಯನುಭವಕ್ಕೆ 3 ಅಂಕಗಳು ( ಉದಾ: ಕಾರ್ಯನುಭವ 3 ವರ್ಷಗಳಿದ್ದಲ್ಲಿ 9 ಅಂಕಗಳು ಹಾಗೂ ಕಾರ್ಯನುಭವ 3 ವರ್ಷಗಳಿಗಿಂತ ಹೆಚ್ಚಿದ್ದರು ಸಹ ಗರಿಷ್ಟ 9 ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು) ಒಟ್ಟು 70 +9=79 ಅಂಕಗಳೆಂದು ಪರಿಗಳಿಸಲಾಗುವುದು ಸದರಿ ಅಂಕಗಳಲ್ಲಿ ಶೇಕಡಾ 50% ಹಾಗೂ ಲಿಖಿತ ಪರೀಕ್ಷೆಯಲ್ಲಿ ಪಡೆದ ಪಡೆದ ಅಂಕಗಳ ಶೇ 50 % ರಷ್ಟು ಕೂಡಿಸಿ ಅಂತಿಮವಾಗಿ 100 ಅಂಕಗಳಿಗೆ ಪರಿಗಣಿಸಲಾಗುವುದು.
5. ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು Documentation Verification ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ ಹಾಗೂ Documentation Verification ಸಂದರ್ಭದಲ್ಲಿ ಅಭ್ಯರ್ಥಿಗಳು ಮೂಲ ದಾಖಲಾತಿಗಳನ್ನು ಹಾಜರು ಪಡಿಸಬೇಕು.
6. ಮೆರಿಟ್ ಆಧಾರದಲ್ಲಿ ಆಯ್ಕೆಯಾದ ಅರ್ಹ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಪಡೆಯಲಾಗುವುದು.
7. ಲಿಖಿತ ಪರೀಕ್ಷೆಗೆ ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ದಿನಾಂಕ/ಸ್ಥಳ ಸಮಯದ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.
8. ನೇಮಕಾತಿಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ, ರದ್ದು ಪಡಿಸುವ ಹಾಗೂ ನಿಬಂದನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಇಲಾಖೆಯು ಹೊಂದಿರುತ್ತದೆ.
9. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ:9739581915 ಗೆ ಸಂಪರ್ಕಿಸಬಹುದಾಗಿದೆ.

➢ ಅಭ್ಯರ್ಥಿಗಳಿಗೆ ಸೂಚನೆಗಳು.

1. ಅಭ್ಯರ್ಥಿಯ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಇ-ಮೇಲ್ ಐಡಿಯನ್ನು ಹೊಂದಿದಲ್ಲಿ ನಮೂದಿಸುವುದು.
2. ಅಭ್ಯರ್ಥಿಗಳು ಪ್ರತಿಯೊಂದು ಹುದ್ದೆಗೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ.
3. ಅಪೂರ್ಣ ಮಾಹಿತಿಯ ಅರ್ಜಿಗಳನ್ನು/ದಾಖಲಾತಿ ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಗೆ/ Documentation Verification ಗೆ ದೂರವಾಣಿ ಕರೆ/SMS ಬಂದಿಲ್ಲವೆಂದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲಾ.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ರಾಯಚೂರು.